ಕಟ್ಟಿದರೆಂಬ ಪ್ರಸಂಗವೇ ಬರುವುದಿಲ್ಲ. ಶ್ರೀಕೃಷ್ಣನ ಆಶೀರ್ವಾದದಿಂದ ಯುದ್ಧ ಮುಕ್ತಾಯವಾಗಿ ಎಲ್ಲರೂ ಆನಂದಸಾಗರದಲ್ಲಿ ಮುಳುಗಿದರೆಂಬ ಭಾವ ವ್ಯಕ್ತಗೊಂಡಿದೆ.

ಒಟ್ಟಾರೆ ಸುಕುಮಾರ ಭಾರತಿ ಪಂಚ ಸೇನಾ ನಾಯಕರ ಸಂಗ್ರಾಮವನ್ನು ಕೃಷ್ಣ ಭಕ್ತಿ ಸಾರಥ್ಯದಲ್ಲಿ ಮುನ್ನಡೆಸಿದ್ದಾನೆ. ಇಲ್ಲಿ ಎಲ್ಲ ಪಾತ್ರಗಳು ತಮಗೆ ಹಂಚಿಕೆಯಾದ ಕರ್ತವ್ಯವನ್ನು ನಿರ್ವಹಿಸಿ ಶ್ರೀಕೃಷ್ಣನ ಆಶೀರ್ವಾದವನ್ನು ಪಡೆದು ನಿರ್ಗಮಿಸಿದಂತೆ ಕಾಣುತ್ತದೆ. ವ್ಯಾಸಭಾರತವನ್ನು ಗಮನಿಸಿದ್ದರೂ ಹಿಂದಿನ ಕವಿಗಳಾದ ಪಂಪ ರನ್ನ ಕುಮಾರವ್ಯಾಸರ ಕಾವ್ಯವನ್ನು ಸಂದರ್ಭಾನುಸಾರ ಬಳಸಿಕೊಂಡಿರುವುದನ್ನು ತುಲನಾತ್ಮಕ ಅಧ್ಯಯನದ ಮೂಲಕ ನೋಡಲು ಹೆಚ್ಚಿನ ಅವಕಾಶವಿದೆ. ಭಾಗವತ ಮನೋಧರ್ಮದ ಕವಿ ಸುಕುಮಾರ ಭಾರತಿ ಕೇವಲ ಯುದ್ಧ ಸನ್ನಿವೇಶದ ಸಂಗತಿಗಳನ್ನು ಮಾತ್ರ ಆಯ್ದುಕೊಂಡು ಕಾವ್ಯ ರಚಿಸಿರುವುದು ಆಶ್ಚರ್ಯವೆನಿಸುತ್ತದೆ. ಒಂದು ಚೌಕಟ್ಟಿನಡಿಯಲ್ಲಿ ರೂಪಗೊಂಡ ಕಾವ್ಯಗಳಲ್ಲಿ ಒಂದು ವ್ಯವಸ್ಥೆಗೆ ಬಂಧಿಯಾದವು. ಆ ವೇದಜಾಡನ್ನು ಬಿಟ್ಟು ವರ್ತಮಾನದ ಸ್ಥಿತಿಗೆ ಒಗ್ಗಿಕೊಳ್ಳಲಾಗದ ಅನಿವಾರ್ಯತೆಯನ್ನು ಕಾಣುತ್ತೇವೆ. ಇದರಿಂದಾಗಿ ಕಬ್ಬಿನರಸ ಹೀರುವುದಕ್ಕಿಂತ ಗರಿ ಮೇಯುವ ಕೆಲಸಕ್ಕೆ ಸೀಮಿತವಾಗುತ್ತದೆ. ಈ ಹಿನ್ನೆಲೆಯಲ್ಲಿ ಸುಕುಮಾರ ಭಾರತಿಯ ಕಾವ್ಯ ಭಕ್ತಿ ಪರಂಪರೆಯ ಸುಳಿಯಲ್ಲಿಯೇ ಸಾಗಿ ಬಂದಂತಿದೆ. ಶ್ರೇಷ್ಠರಿಗಾಗಿ ಶ್ರೇಷ್ಠತೆಗಾಗಿ ನಡೆಯುವ ಎಲ್ಲ ಕಾರ್ಯಗಳಲ್ಲಿ ಯಾವ ಬಗ್ಗೆ ಹಿಂಸೆ ನಡೆದರೂ, ಅದು ಯಾರಿಂದ ನಡೆದರೂ, ಅದು ನಗಣ್ಯ. ಅದನ್ನು ಭಕ್ತಿಯ ಭಾವಾವೇಶದಲ್ಲಿ ಒಪ್ಪಿಕೊಂಡು ಸಾಗುವ ಮನೋವೃತ್ತಿ ಆಶ್ಚರ್ಯವನ್ನು ಉಂಟುಮಾಡುತ್ತದೆ.

ಈಗಾಗಲೇ ಪ್ರಸ್ತಾಪಿಸಿದಂತೆ ಯುದ್ಧ ಬಲಾಢ್ಯರ ನಡುವಿನ ಅಧಿಕಾರದ ನಿರ್ಣಯಕ್ಕಾಗಿ ನಡೆಯುತ್ತಿರುತ್ತದೆ. ಅದರಲ್ಲಿ ನಾಶವಾಗುವವರು ಜನಸಾಮಾನ್ಯರೇ. ಕಾವ್ಯ ಕೇವಲ ರಸ ಮತ್ತು ಭಕ್ತಿಗಷ್ಟೇ ಸೀಮಿತವಲ್ಲ. ಜನರ ದುಃಖದ ಅನುಸಂಧಾನದ ಉದ್ಯೋಗ ಅದಕ್ಕಿದೆ ಎನ್ನುವುದನ್ನು ಮರೆಯುವಂತಿಲ್ಲ. ಪಂಪ ಹೇಳಿದಂತೆ "ಯುದ್ಧವೆಂಬುದು ಸಕಲಪ್ರಜಾ ವಿನಾಶಕರಮಲ್ಲದೆ ಪೆರತಲ್ತು" ಎನ್ನುವ ಮಾತು ಸಾರ್ವಕಾಲಿಕ ಸತ್ಯ. ಪಂಪಭಾರತದಲ್ಲಿ ಆಯುಧ ಗೆದ್ದರೆ ಆದಿಪುರಾಣದಲ್ಲಿ ಆಯುಧ (ಧರ್ಮಯುದ್ಧ) ಸೋಲುತ್ತದೆ. ಈ ಹಿನ್ನೆಲೆಯಲ್ಲಿ ಸುಕುಮಾರ ಭಾರತಿಯ "ಮಹಾಭಾರತ ಯುದ್ಧ ಪಂಚಕ ಕಾವ್ಯ" ನಮ್ಮನ್ನು ಇನ್ನೊಮ್ಮೆ ಆಲೋಚಿಸುವಂತೆ ಮಾಡಿದೆ.


**ಪರಾಮರ್ಶನ ಗ್ರಂಥಗಳು**

೧. ಸುಕುಮಾರ ಭಾರತಿ ವಿರಚಿತ–ಮಹಾಭಾರತ ಯುದ್ಧ ಪಂಚಕ, ಸಂ: ದಿ. ಡಿ. ಕೆ. ಭೀಮಸೇನರಾವ್ ಮತ್ತು ಡಾ. ಕೆ. ರಾಘವೇಂದ್ರ ರಾವ್, ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೮೫.

೨. ಕುಮಾರವ್ಯಾಸ ಭಾರತ ಸಾಂಸ್ಕೃತಿಕ ಮುಖಾಮುಖಿ, ಸಂ: ರಹಮತ್‌ತರೀಕೆರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪.

೩. ಕನ್ನಡ ಭಾರತ– ಸಂ: ಪ್ರಸನ್ನ ಪ್ರ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

೪. ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ–ಸಂಪಾದಕರು ಡಾ. ಕೆ. ವಿ. ಪುಟ್ಟಪ್ಪ, ಪ್ರ: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೦.





PRINCIPAL
J.S.S. Banashankari Arts, Commerce &
Shantikumar Gubbi Science College,
DHARWAD-580 004


78


ISSN - 2347 - 5048


## ಉಯ್ಯಲು ಪದ ಸಾಹಿತ್ಯ : ಪ್ರಭುದೇವರ ನಿಲ್ಲಲಾಡಿದನುಯ್ಯಲ – ವಿವೇಚನ


ಡಾ ಆರ್ ವಿ ಪಾಟೀಲ


ಜನಸಾಮಾನ್ಯರಿಗೆ ಆಧ್ಯಾತ್ಮದ ತತ್ವ–ಸಿದ್ಧಾಂತವನ್ನು ತಿಳಿಸಲು ೧೧–೧೨ ನೇ ಶತಮಾನದ ಶಿವಶರಣರು ಉಯ್ಯಲು ಪದ ಸಾಹಿತ್ಯವನ್ನು ರಚಿಸಿರುವರು, ಲೌಕಿಕದ ಅರಿವಿನಿಂದ ಪಾರಮಾರ್ಥಿಕತೆಯೆಡೆಗೆ ಸಾಗಿ ಶೂನ್ಯತ್ವದಲ್ಲಿ ನಿಲ್ಲುವ ಪರಿಯನ್ನು ತಿಳಿಸಲು, ತತ್ವಯುಕ್ತ ವಿಷಯವನ್ನು ಒಳಗೊಂಡಿರುವ ಈ ಉಯ್ಯಲು ಪದ ಸಾಹಿತ್ಯ ಶರಣರ ಮತ್ತೊಂದು ವಿಶಿಷ್ಟವಾದ ಹೊಸ ಸೃಷ್ಟಿಯಾಗಿದೆ. ಸಮಕಾಲೀನ ಬದುಕಿನ ಮನೋಧರ್ಮಕ್ಕೆ ತಕ್ಕ ವಿಷಯವನ್ನೊಳಗೊಂಡಿರುವುದು. ಈ ಉಯ್ಯಲುಪದ ಸಾಹಿತ್ಯವು ತನ್ನದೇ ಆದ ಛಂದಸ್ಸಿನ ನಿಯಮವನ್ನು ಹೊಂದಿರುವುದು. ಹುಟ್ಟಿದ ಮಗುವಿಗೆ ಹೆಸರಿಡುವ ಸಂದರ್ಭದಲ್ಲಿ ಮಗುವನ್ನು ತೊಟ್ಟಿಲಲ್ಲಿ ಹಾಕಿ ತೂಗುತ್ತಾ ಮುತ್ತೈದೆಯರು ಮಂಗಳಕರಗೀತೆಯನ್ನು ಹಾಡುವರು; ಅಂತಹ ಹಾಡಿನ ಧಾಟಿ, ತೊಟ್ಟಿಲ ತೂಗುವ ಕ್ರಮವನ್ನಾಧರಿಸಿ ಉಸಿರು ಇಳಿವು–ಏರು, ಇಳಿವು–ಏರು, ರೀತಿಯಲ್ಲಿ ಬರುವುದು. 'ಉಯ್ಯಲು ಪದ' ಶರಣರ ಸ್ವತಂತ್ರ ರಚನೆಗಳಲ್ಲಿ ಒಂದು; ಇದು ಸ್ವತಂತ್ರ ಸೃಷ್ಟಿಯಾಗಿದೆ. ವಿದ್ವಾಂಸರು ಕೆಲವು ಕಡೆ 'ಸ್ವರವಚನ'ವೆಂದು ಹೇಳಿದರೂ ಕೂಡಾ ಇದು ಹಸ್ತಪ್ರತಿಗಳಲ್ಲಿ ಪ್ರತ್ಯೇಕ ರಚನೆ ಇರುವುದರಿಂದ ಇದನ್ನು ಸ್ವತಂತ್ರವೆಂದಿದ್ದಾರೆ. ಆದರೆ ಇದು ರೂಪ, ಗಾತ್ರ, ವಿಷಯ ನಿರೂಪಣಾ ಶೈಲಿಯಲ್ಲಿ ಭಿನ್ನತೆಯನ್ನು ಹೊಂದಿದೆ. ಶಿವನನ್ನು ಶಿಶುವಾಗಿ ತೂಗಿ ಹಾಡಿದ ಹಾಡಾಗಿವೆ. ಸಂಶೋಧಕರಾದ ದಿ. ಡಾ.ಎಂ.ಎಂ.ಕಲ್ಬುರ್ಗಿಯವರು ತಮ್ಮ 'ಆದಯ್ಯನ ಲಘು ಕೃತಿಯಲ್ಲಿ' "ಉಯ್ಯಲವೆಂಬುದು ಶರಣರ ಪರಿಭಾಷೆಯಲ್ಲಿ ಶಿವಾನುಭವಕ್ಕೆ ಸಂಕೇತವಾಗಿದೆ" ಎಂದು ಹೇಳಿರುವರು. ಅಷ್ಟಕ್ಕೇ ನಿಲ್ಲದೆ ಅಕ್ಕಮಹಾದೇವಿಯ "ತೂಗಿದೇನುಯ್ಯಲೆ ------ ಎಂಬ ಹಾಡು ಬರುತ್ತಿದ್ದು, ಅದೇ ಲಯದಲ್ಲಿದೆ. ಆದರೆ ಅದಕ್ಕಿಂತ ಸುಂದರವೂ ವಿಸ್ತಾರವೂ ಆದ ಆದಯ್ಯನ ಉಯ್ಯಾಲೆ ಗೀತೆಯಿದ್ದು, ಉಯ್ಯಾಲೆ ತೂಗುವ ಧಾಟಿಯಲ್ಲಿ ಜೀಕುವ ಇದರ ಒಂದು ಅಪರೂಪದ ಸ್ವರವಚನವೆಂದು ಹೇಳಬೇಕೆಂದಿದ್ದಾರೆ. ಆದರೆ ಹೋಲಿಕೆ ಸಾದೃಶ್ಯದಿಂದ ಹೇಳಿದರೂ, ಇದು ಉಯ್ಯಲ ಪದವೆಂದು ಶರಣರು ಪ್ರತ್ಯೇಕಿಸಿ ಬರೆದಿದ್ದಾರೆ. ಆದ್ದರಿಂದ ಶರಣರು ಬರೆದ ಪ್ರತ್ಯೇಕವಾದ ವಿಶಿಷ್ಟ ಅನುಭಾವದ ಭಕ್ತಿಯ 'ಉಯ್ಯಲ ಪದ' ಸಾಹಿತ್ಯ ಪ್ರಕಾರದ ಕೃತಿಯೆಂದು ಗುರುತಿಸಬಹುದು.

**ಅರ್ಥ–ಸ್ವರೂಪ** : ಶೂನ್ಯದಿಂದ ಹಿಂದಕ್ಕೆ ಏರಿ, ಶೂನ್ಯಕ್ಕಿಳಿದು, ಶೂನ್ಯದಿಂದ ಎತ್ತರಕ್ಕೇರುವದು ಉಯ್ಯಲು. ಉಯ್ಯಾಲೆ ಕನ್ನಡ ನಾಮಪದವಾಗಿದ್ದು, ಉಯ್ಯಲು ಪದದ ಅರ್ಥ "ಜೋಕಾಲಿ, ತೊಟ್ಟಿಲು, ತೂಗಾಡುವ ತೊಟ್ಟಿಲು" ಎಂದು, "ತೂಗುಮಣೆ, ತೂಗು ತೊಟ್ಟಿಲು (a Swing)" ಎಂದು ನಿಘಂಟುವಿನ ಅರ್ಥಗಳಿವೆ. "ಉಯ್ಯಲು ಎಂಬುದು ಉಯ್ಯಾಲೆ" ಇಲ್ಲಿ ಜೋಕಾಲಿ ಹೇಗೆ ಮೇಲೆ ಹೋಗಿ ಕೆಳಗೆ ಬಂದು ಮತ್ತೆ ಮೇಲೆ ಹೋಗುವ ರೀತಿಯಾಗಿದೆ. ಇಂತಹ ಸಂದರ್ಭವನ್ನು ಅನುಭವಿಸಿ ಭಕ್ತಿಯಲ್ಲಿ ಓಲಾಡಿದ ಶಿವಶರಣರು "ಉಯ್ಯಲ" ಪದ ಸಾಹಿತ್ಯ ರಚಿಸಿರುವರು.


**ಡಾ.ಆರ್.ವಿ.ಪಾಟೀಲ, ಸಹಾಯಕ ಪ್ರಾಧ್ಯಾಪಕರು,**
ಕನ್ನಡ ವಿಭಾಗ, ಜೆ.ಎಸ್.ಎಸ್. ಬನಶಂಕರಿ ಕಲಾ, ವಾಣಿಜ್ಯ ಮತ್ತು ಎಸ್. ಕೆ. ಗುಬ್ಬಿ ವಿಜ್ಞಾನ ಮಹಾವಿದ್ಯಾಲಯ, ವಿದ್ಯಾಗಿರಿ, ಧಾರವಾಡ.




Date-18-12-2021
UGC Core